ವಿಜಯವಾಣಿ 21.12.16

# ವಿದ್ಯುತ್ ಉಳಿತಾಯ ಸಪ್ತಾಹ

ವಿಜಯವಾಣಿ ಚಿತ್ರ



ರೈಲು ಗಾಲಿ ಕಾರ್ಖಾನೆ ಸಿಬ್ಬಂದಿಗೆ ಎಲ್ಇಡಿ ಬಲ್ಬ್ ವಿತರಣೆ ಮಾಡುವ ಮೂಲಕ ರಾಷ್ಟ್ರೀಯ ವಿದ್ಯುತ್ ಉಳಿತಾಯ ಸಪ್ತಾಹಕ್ಕೆ ಒ.ಪಿ. ಅಗರ್‌ವಾಲ್ ಚಾಲನೆ ನೀಡಿದರು.

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಯಲಹಂಕ ಬಳಿಯ ರೈಲು ಗಾಲಿ ಕಾರ್ಖಾನೆಯಲ್ಲಿ ರಾಷ್ಟ್ರೀಯ ವಿದ್ಯುತ್ ಉಳಿತಾಯ ಸಪ್ತಾಹ ಆಚರಿಸಲಾಯಿತು.

ಡಿ. 12ರಂದು ಶುರುಗೊಂಡ ಸಪ್ತಾಹ ಶನಿವಾರ (ಡಿ. 17) ಮುಕ್ತಾಯಗೊಂಡಿತು. ಸಿಬ್ಬಂದಿಗೆ ಎಲ್ಇಡಿ ಬಲ್ಬ್‌ಗಳನ್ನು ವಿತರಿಸುವ ಮೂಲಕ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಒ.ಪಿ.ಅಗರ್‌ವಾಲ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು.

ಇಇಎಸ್ಎಲ್ ಹಾಗೂ ಉಜಾಲ ಯೋಜನೆಯಲ್ಲಿ ಸಬ್ಸಿಡಿ ದರದಲ್ಲಿ 9 ವಾಟ್ ಹಾಗೂ 20 ವಾಟ್ ಎಲ್ಇಡಿ ಬಲ್ಬ್ ಮತ್ತು ಎಲ್ಇಡಿ ಟ್ಯೂಬ್‌ಲೈಟ್‌ಗಳನ್ನು ಸಂಸ್ಥೆ ಆವರಣದಲ್ಲಿನ ಮಳಿಗೆಯಲ್ಲಿ ವಾರ ಪೂರ್ತಿ ಸಬ್ಸಿಡಿ ದರದಲ್ಲಿ ಮಾರಾಟ ಮಾಡಲಾಯಿತು.

ವಿದ್ಯುತ್ ಉಳಿತಾಯದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಾಗಾರವನ್ನೂ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಆರ್.ಪಿ. ಶರ್ಮ, ಮುಖ್ಯ ಮೆಕಾನಿಕಲ್ ಇಂಜಿನಿಯರ್ ರಾಹುಲ್ ಜೈನ್ ಸೇರಿ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರು, ಅಧಿಕಾರಿಗಳು ಭಾಗವಹಿಸಿದ್ದರು.

---

21/12/2016

## ಪೌರ ಸಮಸ್ಯೆ

Page - 04

KP



ಮಲ್ಲೇಶ್ವರದ 11ನೇ ಅಡ್ಡ ರಸ್ತೆಯಲ್ಲಿ ಮುರಿದು ಬೀಳುವ ಸ್ಥಿತಿಯಲ್ಲಿರುವ ಸಿಗ್ನಲ್ ದೀಪದ ಕಂಬ. ಬೆಸ್ಕಾಂ ಇಲ್ಲವೇ ಬಿಬಿಎಂಪಿ ಅಧಿಕಾರಿಗಳು ಕಂಬವನ್ನು ತೆರವು ಮಾಡಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

---

21.12.16




ಹೊಸ ವಿದ್ಯುತ್ ತಂತಿಗಳನ್ನು ಅಳವಡಿಸಿ ಕೊಳೆಗೇರಿಯ ಎಲ್ಲ ಮನೆಗಳಿಗೂ ಸಮರ್ಪಕ ವಿದ್ಯುತ್ ಸಂಪರ್ಕ ಕಲ್ಪಿಸಲು ಕೂಡಲೇ ವ್ಯವಸ್ಥೆ ಮಾಡಲಾಗುವುದು. ಬೇಸಿಗೆಗೂ ಮುನ್ನ ಕುಡಿವ ನೀರಿನ ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.



। ಎಲ್. ಗೋವಿಂದರಾಜು ಕಾರ್ಪೊರೇಟರ್